## Government of Karnataka

**Deposition Sheet (R.P.N.57) Form 4 Criminal**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ**

| | |
|---|---|
| ಕ್ರಿಮಿನಲ್ ಪ್ರಕರಣ ಸಂಖ್ಯೆ | 197/2017 |

ದಿನಾಂಕ 01-04-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

ಚಾಸಾಃ 1 ಪ್ರಾಸಾಃ 1

| | |
|---|---|
| ಹೆಸರು | ಶಿವರಾಜ |
| ತಂದೆಯ ಹೆಸರು | ನರಸಪ್ಪ |
| ವಯಸ್ಸು | 35 ವರ್ಷ |
| ಉದ್ಯೋಗ | ಕಿರಾಣಿ ಅಂಗಡಿ ವ್ಯಾಪಾರ |
| ವಾಸಸ್ಥಳ | ಗೂಗೇರದೊಡ್ಡಿ, ತಾ ದೇವದುರ್ಗ |

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:-**

ಚಾಸಾ-4 ನನ್ನ ತಮ್ಮ, ಚಾಸಾ-2 ಮತ್ತು 3 ನನಗೆ ಗೊತ್ತಿರುತ್ತಾರೆ. ಚಾಸಾ-5 ರಿಂದ 7 ನನ್ನ ಅಣ್ಣಂದಿರು. ಆರೋಪಿತರು ನನಗೆ ಗೊತ್ತಿರುತ್ತಾರೆ. ದಿನಾಂಕ: 17-04-2016 ರಂದು ಬೆಳಿಗ್ಗೆ ದೇವದುರ್ಗ ದಿಂದ ನಮ್ಮ ಕಿರಾಣಿ ಅಂಗಡಿಗೆ ಬೇಕಾಗಿದ್ದ ಸಾಮಾನುಗಳನ್ನು ಖರೀದಿ ಮಾಡಿಕೊಂಡು ನನ್ನ ಗಾಡಿಯ ಮೇಲೆ ಇಟ್ಟುಕೊಂಡು ವಾಪಸ್ಸು ಊರಿನ ಕಡೆಗೆ ಹೋಗುತ್ತಿದ್ದಾಗ, ಸಮಯ ಬೆಳಿಗ್ಗೆ 7-30 ರಿಂದ 8-30 ಗಂಟೆ ಗೆ ನಮ್ಮ ಊರಿನ ತೋಟಗಾರಿಕೆ ಗೇಟ್ ಹತ್ತಿರ ರಸ್ತೆಯಲ್ಲಿ ಹೋಗುತ್ತಿದ್ದಾಗ, ಆರೋಪಿ ನಂಬರ್ 1 ರಿಂದ 5 ರವರು ಇವರು ತಮ್ಮ ಆಟೋಗೆ ಅಡ್ಡಬಂದಿದ್ದೇನೆಂದು ನನಗೆ ಹೊಲಸು ಸೂಳೆ ಮಗನೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಆಗ ನಾನು ಸುಮ್ಮನೆ ಬಿಡಿ ಎಂದು ಕೇಳಿರುತ್ತೇನೆ. ಆಗ 1ನೇ ಆರೋಪಿ ಬಡಿಗೆ ತೆಗೆದುಕೊಂಡು ನನ್ ಬೆನ್ನಿಗೆ ಹೊಡೆದಿರುತ್ತಾರೆ. 2ನೇ ಆರೋಪಿ ಕಲ್ಲು ತೆಗೆದುಕೊಂಡು ನನ್ನ ಕಾಲಿಗೆ ಹೊಡೆದಿರುತ್ತಾನೆ. 6ನೇ ಆರೋಪಿ ನರಸಯ್ಯ ಇವನು ಕಟ್ಟಿಗೆ ತೆಗೆದುಕೊಂಡು ಕೈಗೆ ಮತ್ತು ಬೆನ್ನಿಗೆ ಹೊಡೆದಿರುತ್ತಾನೆ. ಈ ವಿಷಯ ತಿಳಿದುಕೊಂಡು ನನ್ನ ತಮ್ಮ ಚಾಸಾ-4 ಬಿಡಿಸಲು ಬಂದಾಗ, ಶಿವಪ್ಪ ಮತ್ತು ಸಿದ್ದಪ್ಪ ಇವರು ಕೊಡ್ಲಿಯನ್ನು ತೆಗೆದುಕೊಂಡು ನನ್ನ ತಮ್ಮನ ತಲಗೆ ಕೊಡ್ಲಿಯಿಂದ ಹೊಡೆದು

ರಕ್ತಗಾಯ ಮಾಡಿರುತ್ತಾನೆ. ಆರೋಪಿತರು ನಿಮ್ಮನ್ನು ಜೀವ ಸಹಿತ ಉಳಿಸುವುದಿಲ್ಲ ಎಂದು ಜೀವದ ಬೆದರಿಕೆ ಹಾಕಿರುತ್ತಾರೆ. ಜಗಳ ಬಿಡಿಸಲು ನಮ್ಮೂರಿನ ಚಾಸಾ-5 ರಿಂದ 7 ರವರು ಬಂದಿರುತ್ತಾರೆ. ಈ ಬಗ್ಗೆ ನಾನು ದೂರು ಕೊಟ್ಟಿರುತ್ತೇನೆ. ಸಾಕ್ಷಿ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿ ಪಿ 1 ಎಂದು ಗುರುತಿಸಲಾಯಿತು. ಸಾಕ್ಷಿ ಸಹಿಯನ್ನು ನಿ ಪಿ 1(ಎ) ಎಂದು ಗುರುತಿಸಲಾಯಿತು. ದೂರನ್ನು ಅದೇ ದಿನ ಮಧ್ಯಾಹ್ನ 1-00 ಗಂಟೆಗೆ ಕೊಟ್ಟಿರುತ್ತೇನೆ. ಅದೇ ದಿನ ಪೋಲಿಸರು ಘಟನಾ ಸ್ಥಳಕ್ಕೆ ಬಂದು ನಾನು ತೋರಿಸಿದ ಸ್ಥಳದಲ್ಲಿ ಪಂಚನಾಮೆ ಮಾಡಿರುತ್ತಾರೆ. ಸಾಕ್ಷಿದಾರರು ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿ ಪಿ 2 ಎಂದು ಗುರುತಿಸಲಾಯಿತು. ಪಂಚನಾಮೆಯನ್ನು ಮಾಡಿ 2 ಕಟ್ಟಿಗೆ, ಒಂದು ಹಿಡಿ ಗಾತ್ರದ ಕಲ್ಲು, ಒಂದು ಕೊಡ್ಲಿಯನ್ನು ಪೋಲಿಸರು ವಶಪಡಿಸಿಕೊಂಡಿರುತ್ತಾರೆ. ಪಂಚನಾಮೆಯನ್ನು ಸಂಜೆ 4-00 ಗಂಟೆಯಿಂದ 5-00 ಗಂಟೆಯವರೆಗೆ ಸ್ಥಳದಲ್ಲಿ ಮಾಡಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದಿರುವ 2 ಕಟ್ಟಿಗೆ, ಒಂದು ಹಿಡಿ ಗಾತ್ರದ ಕಲ್ಲು, ಒಂದು ಕೊಡ್ಲಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಮು ಮಾ 1 ರಿಂದ 4 ಎಂದು ಗುರುತಿಸಲಾಯಿತು. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿತರು ಗೈರು ಹಾಜರು ಇದ್ದು ಗುರುತಿಸಲು ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

**ಪಾಟೀ ಸವಾಲು: ಆರೋಪಿತರ ಪರ ಶ್ರೀ ಎಸ್ ಎಮ್ ಆರ್ ವಕೀಲರಿಂದ : -**

**ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ಸಾಕ್ಷಿಯು ನೀಡಿದ ಸಾಕ್ಷ್ಯವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿಕೊಳ್ಳಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.
ದೇವದುರ್ಗ